ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಬೇರೆ ನೀತಿಯನ್ನನುಸರಿಸುವುದಿಲ್ಲ. ಪ್ರತಿಯೊಂದು ಸಂಘಕ್ಕೂ ಹೊಸ ನೀತಿಯನ್ನು ನುಸರಿಸಿದರೆ ಯೋಗ್ಯವಲ್ಲ. ನಾವು ಕೆಲವೊಂದು ತತ್ವಗಳಮೇರೆ ಮತ್ತು ಕೇಂದ್ರ ಸರ್ಕಾರದವರು ಹಾಕಿಕೊಟ್ಟ ತತ್ವಕ್ಕನುಸಾರವಾಗಿ ಇದನ್ನು ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಕೋ-ಆಪರೇಟಿವ್ ಸೊಸೈಟಿಗಳಿಗೆ ಸರ್ಕಾರದವರು ನಾಮಕರಣ ಮಾಡತಕ್ಕ ನೀತಿಯನ್ನು ಬಿಟ್ಟುಬಿಡುತ್ತಾರೆಂದು ಮೂರು ನಾಲ್ಕು ತಿಂಗಳ ಕೆಳಗೆ ಭಾಷಣದಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದ್ದರು. ಇಪ್ಪೊತ್ತಿನ ದೃಷ್ಟಿಯಲ್ಲಿ ಸರ್ಕಾರದವರು ಈ ನಾಮಕರಣ ಪದ್ಧತಿಯನ್ನು ಕೈ ಬಿಡುತ್ತಾರೆಯೇ ? ಆ ವಿಚಾರದಲ್ಲಿ ತಮ್ಮ ನಿಲುವು ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ನಿಲುವು ಏನೆಂದು ಹೇಳಿದ್ದೇನೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಎಲ್ಲಿ ಸರ್ಕಾರ ಹಣವನ್ನು ಬಹಳ ದೊಡ್ಡ ಪ್ರೊತ್ಸಾದಲ್ಲಿ ಹಾಕಿಲ್ಲವೋ ಅಂಥಲ್ಲಿ ನಾವು ಸರ್ಕಾರದ ಪರವಿಯಿಂದ ಪ್ರತಿನಿಧಿಗಳನ್ನು ನೇಮಿಸಬಾರದೆಂದು ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಗೋಪಾಲರಾವ್ ಮುದಬಿ.—ತಾವು "processing unitಗೆ matching contribution" ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನಿತರ ಸಂಸ್ಥೆಗಳಲ್ಲಿ ಈ ಪ್ರಕಾರ ಎಲ್ಲಾದರೂ ಸಾಲ ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಬದರೆಯಲ್ಲಿಯೂ ಕೊಟ್ಟಿದ್ದೇವೆಂದು ಕಾಣುತ್ತದೆ.

ಶ್ರೀ ಜಿ. ರಾಮೇಗೌಡ.—1961-62ನೇ ಸಾಲಿನ ಆಡಿಟ್ ವರದಿಯಲ್ಲಿ ಈ ಸೊಸೈಟಿಯು ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಇನ್ನೊಂದು ಸಂದರ್ಭದಲ್ಲಿ ಈ ಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಈ ಸೊಸೈಟಿಯ ಆಡಿಟ್ ರಿಪೋರ್ಟಿನಲ್ಲಿ, ಅಕ್ರಮಗಳು, ಅನ್ಯಾಯಗಳು ನಡೆದಿವೆ. ಸೊಸೈಟಿ ಸರಿಯಾಗಿ ನಡೆಯುತ್ತಿಲ್ಲವೆಂದು ತಿಳಿಸಿದ್ದಾರೆ. ಇನು ಮುಂದೆ ಇಂಥ ಅಕ್ರಮಗಳು ನಡೆಯದೆ ಇರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಷೇರು ಬಂಡವಾಳವಲ್ಲದೆ ಸರ್ಕಾರದಿಂದ ಈ ಸೊಸೈಟಿಗೆ ಎಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಷ್ಟು ಹಣ ಕೊಟ್ಟಿದ್ದೇವೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಲಾರಿಯನ್ನು ಕೊಳ್ಳಲಕ್ಕೆ ಸಾಲ ಕೊಟ್ಟಿದ್ದೇವೆ, ಗೋಡೌನ್‌ಗಾಗಿ ಕೊಟ್ಟಿರಬಹುದೋ ಏನೋ, ಗೊತ್ತಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಸೊಸೈಟಿ ಸಮರ್ಪಕವಾಗಿ ಕೆಲಸ ಮಾಡದೆ ಇದ್ದರೂ ಒಂದು ಲಕ್ಷ ರೂಪಾಯಿ ಬಂಡವಾಳದಲ್ಲಿ 90,000 ರೂಪಾಯಿಗಳನ್ನು ಸರ್ಕಾರದವರು ಷೇರು ಕಾಂಟ್ರಿಬ್ಯೂಷನ್ ಆಗಿ ಕೊಟ್ಟಿದ್ದೀರಿ. ಅಂಥ ಹೆಚ್ಚಿನ ಮೆಹರತ್ತು ಏನು, ಸ್ವಾಮಿ ?

Sri RAMAKRISHNA HEGDE.—It is a hypothetical question. ಸಮರ್ಪಕವಾಗಿ ಕೆಲಸಮಾಡದೆ ಇದ್ದರೂ ಕೊಟ್ಟಿದ್ದೇವೆಂದು ಅವರು ಹೇಳುತ್ತಾರೆ. ನಾವು ಹಣವನ್ನು ಕೊಡತಕ್ಕ ಕಾಲದಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಗ್ರಹಿಸಿಕೊಂಡು ಕೊಟ್ಟಿದ್ದೇವೆ. ಅಲ್ಲದೇ ಈ ಹಣವನ್ನು ಒಂದೇ ವರ್ಷದಲ್ಲಿ ಕೊಟ್ಟಿದ್ದಲ್ಲ. 1956-57 ರಿಂದ 1962-63ರ ವರೆಗೂ ಸೇರಿ 90,000 ರೂಪಾಯಿ ಕೊಟ್ಟಿದ್ದೇವೆ.

Indankal Medium Size Project in Chitapur Taluk, Gulbarga District.

*Q.—654. Sri S. RUDRAPPA (Kalgi).—

Will the Government be pleased to state :—

(*a*) whether it is a fact that Indankal Medium Size Project in Chitapur Taluk, Gulbarga District, has been surveyed and necessary estimate has been prepared ?

(*b*) the number of medium sized projects in Gulbarga District included in Third Five-Year Plan ?

A.—Sri S. NIJALINGAPPA (Chief Minister).—

(*a*) No.
(*b*) Nil.

Sri S. RUDRAPPA.—May I know whether the Government is aware that the percentage of irrigation in Gulbarga District is only 1.25, which is the lowest compared to the other areas of the Mysore State?

† Sri S. NIJALINGAPPA.—Government is aware that it is very low.

Sri S. RUDRAPPA.—If so, what are the steps taken by Government to increase irrigation facilities in this district?

Sri S. NIJALINGAPPA.—Government are contemplating not only this scheme but ten other schemes in Gulbarga District. They are being worked out and one of them namely the Chandrapalli Project has been recommended.

Sri J. P. SARVESH.—What are reasons for not estimating the medium-sized projects and what are the reasons for this prolonged delay?

Sri S. NIJALINGAPPA.—I cannot answer for the past.

Sri C. J. MUCKANNAPPA.—Out of the ten projects just mentioned by the Chief Minister, may I know if this Indankal Project is also included?

Sri S. NIJALINGAPPA.—Yes. It is being investigated.

Construction of a new Over-bridge at Sriramapuram.

**Q.*—652. Sri K. DEVAYYA (Malleswaram).—

Will the Government be pleased to state:—

(*a*) whether it has come to the notice of the Government that the existing over-bridge at Sriramapuram, connecting the Greater Rajajinagar with its Industrial suburbs and Housing Colonies on the Western side and Malleswaram on the Eastern side, is only 11½ feet in width;

(*b*) whether they are aware of several accidents on the bridge resulting in deaths and serious injuries to persons, and school going girls and boys, by lorries and B. T. S. buses;

(*c*) how many times, the protecting walls on either side of the bridge had been damaged during the past six months;

(*d*) whether there is a proposal for the construction of a new bridge before the Corporation at a cost of Rs. 1,80,000;

(*e*) whether Government intend to taking-up the above scheme on top-priority basis as it has become too dangerous for vehicular and pedestrian crossing on the existing bridge?

A.—Sri K. PUTTASWAMY (Minister for Municipal Administration)

(*a*) The width is 13½ feet.
(*b*) Yes.